‘ಆಯ್ತೇನೇ?’ ಶಶಿಧರ ಬೂಟಿನ ಲೇಸ್ ಬಿಗಿದುಕೊಳ್ಳುತ್ತಾ, ಗಳಿಗೆಗಿಪ್ಪತ್ತು ಸಲ ವಾಚ್ ನೋಡಿಕೊಳ್ಳುತ್ತಾ ದೊಡ್ಡ ದನಿಯಲ್ಲಿ ಅರಚಿದ.

‘ನೀನು ಆಯ್ತೇನೇ ಅಂತ ಕೂಕ್ಕೊಂಡ್ಬಿಟ್ಟರೆ? ನಾನೇನು ಆಟ ಆಡ್ತಾ ಇದೀನಾ ಇಲ್ಲೀ. ನನಗೂ ಎರಡೇ ಕೈಇರೋದು. ವಿನೂಗೆ ರೆಡಿ ಮಾಡಬೇಕು, ಇಲ್ದೇ ಇದ್ದರೆ ಆ ವ್ಯಾನ್ ಡ್ರೈವರ್ ಒಂದೇ ಸಮ ಬೊಂಬಡ ಹೊಡೀತಾನೆ. ಒಂದು ನಿಮಿಷ ಲೇಟಾದರೆ ನೀನು ಕಿರಿಚಿಕೋತೀಯಾ. ನಿಮ್ಮನ್ನೆಲ್ಲಾ ಸಾಗಹಾಕಿ ನಾನು ಯಾವಾಗ ರೆಡಿಯಾಗೋದು?’ ಅಡುಗೆ ಮನೆಯಿಂದ ಮಾರುತ್ತರ.

‘ಸರಿ ಮಾರಾಯ್ತೀ. ಆ ಒಣಕಲು ಬ್ರೆಡ್ಡನ್ನೇ ಕೊಡು. ತಿಂದುಕೊಂಡು ಹೋಗ್ತೀನಿ.’

‘ನೀನೇ ಎದ್ದು ತೊಗೊ. ನನ್ನ ಕೈ ಬಿಡುವಿಲ್ಲ.’

ಶಶಿಧರ ಎದ್ದು ಫ್ರಿಡ್ಜ್ ಬಾಗಿಲು ತೆಗೆದು ಬ್ರೆಡ್ಡಿಗಾಗಿ ಹುಡುಕಾಡಿದ. ಅವನ ಕಣ್ಣಿಗೆ ಬೀಳಲಿಲ್ಲ.

‘ಶೀಲಾ, ಎಲ್ಲಿಟ್ಟಿದ್ದೀಯೇ ಬ್ರೆಡ್ಡನ್ನಾ?’ ಅಸಹನೆ ತುಂಬಿ ತುಳುಕುತ್ತಿತ್ತು.

‘ಸರಿಯಾಗಿ ಕಣ್ಣುಬಿಟ್ಟು ಹುಡುಕು.’

ಇನ್ನೊಂದು ಸಲ ಬಗ್ಗಿ ಕಣ್ಣು ಹಾಯಿಸಿದ. ಪಾತ್ರೆಯೊಂದರ ಹಿಂದೆ ಬ್ರೆಡ್ ಕಾಣಿಸಿದಂತಾಯಿತು. ಆ ಪಾತ್ರೆಯನ್ನು ಹೊರತೆಗೆಯಲು ಹೋದ. ಪಾತ್ರೆ ಕೈ ಜಾರ್‍ರಿ ಕೆಳಗೆ ಬಿತ್ತು. ‘ಪಿಟ್.’ ಬಿದ್ದ ರಭಸಕ್ಕೆ ಪಾತ್ರೆಯೊಳಗಿದ್ದ ಮೊಸರು ಫ್ರಿಡ್ಜ್‌ನೊಳಗೆ, ಅವನ ಬಟ್ಟೆಯ ಮೇಲೆ ಎಗುರಿತು. ಪಾತ್ರೆ ಬಿದ್ದ ಶಬ್ದಕ್ಕೆ ಶಶಿ ಬೆಚ್ಚಿದ. ಅಡುಗೆಮನೆಯಿಂದ ‘ಏನೋ ಅದೂ?’ ಶೀಲಾ ಆಗಬಾರದ್ದೇನೋ ಆಗಿಹೋಯಿತೆನ್ನುವಂತೆ ಕಿರುಚಿದಳು.

‘ಮೊಸರೇ. ಚೆಲ್ಲಿಹೋಯಿತು.’

‘ಯಾವ ಕೆಲಸ ತಾನೇ ಸರಿಯಾಗಿ ಮಾಡ್ತೀಯ ನೀನು! ನನಗ್ಗೊತ್ತಿಲ್ಲ, ಎಲ್ಲಾ ಕ್ಲೀನ್ ಮಾಡಿಹೋಗು. ನನ್ನ ಕೈಲಾಗಲ್ಲ.’

ಎದ್ದ ಗಳಿಗೆ ಚೆನ್ನಾಗಿಲ್ಲ ಅಂತಂದುಕೊಂಡು ಬಟ್ಟೆ ಬಿಚ್ಚಿ, ಫ್ರಿಡ್ಜು, ನೆಲಗಳನ್ನು ಒರೆಸಿದ. ಹತ್ತು ನಿಮಿಷವಾಯಿತು. ಬೇರೆ ಪ್ಯಾಂಟು ಷರಟುಗಳನ್ನು ಏರಿಸಿಕೊಂಡ.

‘ಆಯ್ತೇ ಮಾರಾಯ್ತೀ. ಎಲ್ಲ ಕ್ಲೀನ್ ಮಾಡಿದ್ದೀನಿ. ಬರ್ತೀನಿ.’

‘ಊಂ’ ಅಡುಗೆಮನೆಯಿಂದಲೇ ಹೊರಟಿತು ದನಿ.

ರಸ್ತೆಯಲ್ಲೇ ನಿಲ್ಲಿಸಿದ್ದ ಕಾರ್ ಹತ್ತಿದ. ಬೆಲ್ಟ್ ಕಟ್ಟಿಕೊಂಡು ಸ್ಟಾರ್ಟ್ ಮಾಡಿದ. ಸ್ಟಾರ್ಟ್ ಆಗಲಿಲ್ಲ. ಅವನ ತಾತ ಕಲಿಸಿದ ಬುದ್ಧಿಯನ್ನೆಲ್ಲಾ ಉಪಯೋಗಿಸಿ ಮತ್ತೆ ಕೀ ತಿರುಗಿಸಿದ. ಸ್ಟಾರ್ಟ್ ಆಯಿತು. ಸದ್ಯ ಅಂದುಕೊಂಡ. ಬಾಗಿಲ ಕಡೆ ನೋಡಿದ. ಶೀಲಾ ಅಲ್ಲಿರಲಿಲ್ಲ.

ಸಿಗ್ನಲ್ ಬಂತು. ನೋಡಿದ. ಇನ್ನೂ ನೂರಿಪ್ಪತ್ತು ಸೆಕೆಂಡುಗಳು. ಡಬ್ಬಿ ತೆಗೆದು ಗಬಗಬ ತಿಂದ. ಬಿಕ್ಕಳಿಸಿದ. ಬಾಟಲ್ ತೆಗೆದು ನೀರು ಕುಡಿದ. ಹೊಟ್ಟೆಗೆ ಬಿದ್ದಮೇಲೆ ಜೀವ ಸ್ವಲ್ಪ ತಣ್ಣಗಾಯಿತು. ಗ್ರೀನ್ ಸಿಗ್ನಲ್ ಕಾಣಿಸಿತು.

★★★

ಆಫೀಸ್ ತಲುಪಿ ಕಾನ್ಫರೆನ್ಸ್ ರೂಮು ಹೊಕ್ಕಾಗ ಅಲ್ಲಿದ್ದವರೆಲ್ಲಾ ಇವನತ್ತಲೇ